ದಿನಾಂಕ 25-10-2025 ರಂದು ಮಾಡಿದ ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲು.

ದಿನಾಂಕಃ 26-11-2025 ರಂದು ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಪಿ.ಆರ್. ವಕೀಲರಿಂದಃ

1. ನನ್ನ ಮುಖ್ಯ ವಿಚಾರಣೆಯನ್ನು ತಯಾರು ಮಾಡುವ ಸಮಯದಲ್ಲಿ ನನ್ನ ಉದ್ಯೋಗ ಐಚರ್ ಸ್ಪೇರ್ ಪಾರ್ಟ್ಸ್ ನಲ್ಲಿ ಎಂದು ತಿಳಿಸಿದ್ದೆ. ಮುಖ್ಯ ವಿಚಾರಣೆಯಲ್ಲಿ ಅದನ್ನೇ ನಮೂದಿಸಿದ್ದೀರಾ ಎಂದರೆ ಸಾಕ್ಷಿದಾರರು ನಾನು ಆಗ ಕೂಲಿ ಕೆಲಸನೂ ಮಾಡುತ್ತಿದ್ದೆ ಮತ್ತು ಐಚರ್ ನಲ್ಲೂ ಕೆಲಸ ಮಾಡುತ್ತಿದ್ದೆ, ಆದ್ದರಿಂದ ಕೂಲಿ ಎಂದು ನಮೂದಿಸಿದ್ದೆ ಎಂದು ಹೇಳುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಎರಡೂ ಉದ್ಯೋಗ ನಮೂಸಿದ್ದನ್ನು ಪರಿಶೀಲಿಸಿ ಸಹಿ ಮಾಡಿದ್ದೀರಾ ಎಂದರೆ ಹೌದು ಎನ್ನುತ್ತಾರೆ.

2. ನಿಪಿ-1 ವಿಲ್ ನಮ್ಮ ಮನೆಯಲ್ಲಿ ಸಿಕ್ಕಿದೆ ಎಂದು ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೇನೆ. ಆ ಮನೆ ಸುಗಟೂರಿನ ನಮ್ಮ ಜಮೀನಿನಲ್ಲಿದೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

3. ನಿಮ್ಮ ಅಜ್ಜನಿಗೆ ಅನಾರೋಗ್ಯ ಇದ್ದಾಗ ಎಲ್ಲಿ ತೋರಿಸಿದ್ದೀರಿ ಎಂದರೆ ಸಾಕ್ಷಿದಾರರು ಅನಾರೋಗ್ಯ ಎಂದರೆ ಸಣ್ಣಪುಟ್ಟ ಜ್ವರ, ಕಾಲುನೋವು ಈ ರೀತಿ ಬಂದಾಗ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದ್ದೇನೆ ಎನ್ನುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಬೇಕಾದರೆ ರೂ.10/-ರ ಚೀಟಿ ಮಾಡುತ್ತಾರೆ ಎಂದರೆ ಸರಿ. ಆ ರೀತಿ ಯಾವುದೇ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

4. ನನ್ನ ಅಜ್ಜ ತೀರಿಕೊಂಡಿದ್ದು ದಿನಾಂಕ 08-02-2023. ನಿಪಿ-1 ವಿಲ್ ಮನೆಯಲ್ಲಿನ ಟ್ರಂಕ್ ನಲ್ಲಿ ಸಿಕ್ಕಿದೆ. ಆ ವಿಷಯವನ್ನು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಎಂದರೆ ಸರಿ. ನಿಪಿ-1 ಸಿಕ್ಕಿದ ಮೇಲೆ ಅದನ್ನು ಮೊದಲು ವಕೀಲರಿಗೆ ತೋರಿಸಿದೆ. ನನ್ನ ತಂದೆಯ ಸಹೋದರ ಅಥವಾ ಸಹೋದರಿಯರಿಗೆ ನಿಪಿ-1 ಸಿಕ್ಕ ಬಗ್ಗೆ ಮತ್ತು ಅದರಲ್ಲಿ ದಾವಾಆಸ್ತಿ ನನಗೆ ಬಂದಿದೆ ಎಂದು ತಿಳಿಸುವ ಬಗ್ಗೆ ಪ್ರಯತ್ನ ಮಾಡಿಲ್ಲ. ನನ್ನ ಹೆಸರಿಗೆ ವಿಲ್ ಮಾಡಿದ ಬಗ್ಗೆ ಅವರಿಗೆ ನಾನು ತಿಳಿಸಿಲ್ಲ.

5. ದಾವಾಆಸ್ತಿ ಸಂ. 181 ಇದು ನನ್ನ ತಾತ ಮತ್ತು ಆತನ ನಾಲ್ಕು ಜನ ಮಕ್ಕಳ ಒಟ್ಟು ಕುಟುಂಬಕ್ಕೆ ಮಂಜೂರಾಗಿದ್ದ ಜಮೀನು ಎಂದರೆ ಸರಿಯಲ್ಲ. ನಿಪಿ-1 ನ್ನು ಸೃಷ್ಟಿ ಮಾಡಿದ್ದರಿಂದ

ನನ್ನ ತಂದೆಯ ಸಹೋದರ ಮತ್ತು ಸಹೋದರಿಯರ ಗಮನಕ್ಕೆ ತರದೇ ನೇರವಾಗಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ವೃಧ್ಯಾಪ್ಯ ವೇತನ ಮಾಡಿಸುವುದಾಗಿ ಹೇಳಿ ಆತನನ್ನು ಕರೆದುಕೊಂಡು ಹೋಗಿ ನಿಪಿ-1 ವಿಲ್‌ನ್ನು ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಅಜ್ಜ ಮುನಿವೆಂಕಟಪ್ಪ ಇವರ ಯೋಗಕ್ಷೇಮವನ್ನು ನಾನು ಯಾವತ್ತೂ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆಯಂದಿರು ಮತ್ತು ಚಿಕ್ಕಪ್ಪ ಇವರ ಭಾಗವನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ-1 ನ್ನು ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ.

7. ಸುಗಟೂರನ್ನು 20 ವರ್ಷಗಳ ಹಿಂದೆಯೇ ಬಿಟ್ಟು ಹಾರೋಹಳ್ಳಿಯಲ್ಲಿಯೇ ನಾವು ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನಾನು ಎರಡೂ ಕಡೆ ಇರುತ್ತಿದ್ದೆ ಮತ್ತು ಎರಡೂ ಕಡೆ ವಿದ್ಯಾಭ್ಯಾಸ ಮಾಡಿದ್ದೇನೆ ಎನ್ನುತ್ತಾರೆ. ಆ ರೀತಿ ಎರಡೂ ವಾಸ ಇದ್ದೆ ಎಂದು ಮುಖ್ಯ ವಿಚಾರಣೆಯಲ್ಲಾಗಲೀ, ಅರ್ಜಿಯಲ್ಲಾಗಲೀ ಹೇಳಿಲ್ಲ ಎಂದರೆ ಸರಿ. ಎರಡೂ ಕಡೆ ವಾಸ ಇದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿ. ನಾನು ಸುಗಟೂರಿನಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಕೋಲಾರದ ಹಾರೋಹಳ್ಳಿಯಲ್ಲಿ ವಾಸವಿದ್ದೇವೆ ಎಂದು ತಿಳಿಸಿದ್ದೇನೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸಿರುತ್ತಾರೆ.)

ಓ. ಹೇ. ಕೇ. ಸ. ಇದೆ,

ಸಹಿ/-

**(ವಿಜಯಕುಮಾರ್ ಎಂ. ಆನಂದಶೆಟ್ಟಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ